# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2404922
E-mail : aeehtgmys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.


ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ. 1567-68 ದಿನಾಂಕ : 15.11.2017

## ಸಭಾ ನಡಾವಳಿ

**ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ದಿನಾಂಕ : 08.11.2017 ರಂದು ಬೆಳಗ್ಗೆ 11 :00 ಗಂಟೆಗೆ ಜನ ಸಂಪರ್ಕ ಸಭೆಯನ್ನು ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.**

**ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-**

1. ಶ್ರೀಯುತ ನರಸಿಂಹೇಗೌಡ, ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಕೇಶವಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ಎಂ. ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.

**ಸಭೆಗೆ ಹಾಜರಿದ್ದ ಗ್ರಾಹಕರು :**

1. ಶ್ರೀ ರವಿಕುಮಾರ್, ವಿಜಯನಗರ 1ನೇ ಹಂತ, ಮೈಸೂರು.
2. ಶ್ರೀ ಅಶ್ವಥ್‌ನಾರಾಯಣ್, ಮೈಸೂರು.
3. ಶ್ರೀ ಬಸವರಾಜು ಹಿನಕಲ್, ಮೈಸೂರು.
4. ಶ್ರೀ ಚಿನ್ನಪ್ಪ, ಲಿಂಗದೇವರಕೊಪ್ಪಲು, ಮೈಸೂರು

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

...2...

Scanned by CamScanner

ದಿನಾಂಕ : 31.08.2017 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.

| ಕ್ರ. ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ತೆಗೆದುಕೊಂಡ ಕ್ರಮಗಳು |
|---|---|---|---|
| 1 | ಶ್ರೀ ರವಿಕುಮಾರ್ ವಿಜಯನಗರ 1ನೇ ಹಂತ | ▪ ಬೀದಿದೀಪ ಹಾಗೂ ಕುಡಿಯುವ ನೀರಿನ ಮಾಪಕಗಳ ಮೀಟರ್ ಬಾಕ್ಸ್ ನಿರ್ವಹಣೆ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ. | ಬೀದಿದೀಪ ಹಾಗೂ ಕುಡಿಯುವ ನೀರಿನ ಮಾಪಕಗಳ ಮೀಟರ್ ಬಾಕ್ಸ್ ನಿರ್ವಹಣೆ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಆಯಾ ನಗರಾಭಿವೃದ್ಧಿ ಪ್ರಾಧಿಕಾರ, ಮಹಾನಗರ ಪಾಲಿಕೆ ಹಾಗೂ ಗ್ರಾಮಪಂಚಾಯಿತಿಯವರಿಗೆ ಪತ್ರ ಬರೆಯಲಾಗಿದೆ. |
| 2 | ಶ್ರೀ ಮಹದೇವು, ಹಿನಕಲ್, ಮೈಸೂರು | ▪ ರಾಜರಾಜೇಶ್ವರಿ ನಗರದ ಆಶ್ರಯ ಬಡಾವಣೆಯ ವ್ಯಾಪ್ತಿಯಲ್ಲಿ 5-6 ಕಂಬಗಳನ್ನು ಸ್ಥಳಾಂತರಿಸಿ ಕೊಡಲು ಕೋರಿರು ತ್ತಾರೆ.<br>▪ ಆಶ್ರಯ ಮನೆಯ ವ್ಯಾಪ್ತಿ ಯಲ್ಲಿಯೇ ಹೆಚ್ಚುವರಿ ಮಧ್ಯಂತರ ಕಂಬಗಳನ್ನು ಅಳವಡಿಸಿಕೊಡಲು ಕೋರಿರು ತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತ ನಾಡಿ ಕಂಬಗಳನ್ನು ಸ್ಥಳಾಂತರಿ ಸುವುದಾದರೆ ತಾವೇ ಸ್ವಯಂ ಕಾರ್ಯನಿರ್ವಾಹಣೆ ಯೋಜನೆ ಯಡಿ ಕಾಮಗಾರಿಯನ್ನು ಪೂರ್ಣ ಗೊಳಿಸಿಕೊಳ್ಳಲು ಸೂಚಿಸಿದರು. |
| 3 | ಶ್ರೀ ಕುಮಾರ್, ಶ್ರೀ ನಾಗರಾಜು, ಶ್ರೀ ತಮ್ಮಯ್ಯ ಜಿ.ಜಿ. ಬ್ಲಾಕ್, ಮೈಸೂರು. | ▪ ನಮ್ಮ ಸ್ಥಾವರಗಳು ಇಲವಾಲ ವ್ಯಾಪ್ತಿಗೆ ಬರುತ್ತಿದ್ದು, ಜಿ.ಜಿ.ಬ್ಲಾಕ್‌ನ ನಿರ್ವಹಣಾ ಕಾರ್ಯವನ್ನು ಹೂಟಗಳ್ಳಿಗೆ ವರ್ಗಾಹಿಸಲು ಕೋರಿರುತ್ತಾರೆ<br>▪ ತಮ್ಮ ಬಿಲ್ಲಿನ್ನು ಜಿ.ಜಿ.ಬ್ಲಾಕ್‌ನಿಂದ ಇಲವಾಲ ಕಛೇರಿಗೆ ಹೋಗಿ ಪಾವತಿಸಲು ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. | ▪ ದಿನಾಂಕ : 01.09.2017 ರಿಂದಲೇ ಗ್ರಾಹಕರ ದೂರುಗಳನ್ನು ಹೂಟಗಳ್ಳಿ ಶಾಖೆಯ ಸೇವಾ ಕೇಂದ್ರದಲ್ಲಿ ನಿವಾರಿಸಲಾಗುತ್ತಿದೆ.<br>▪ ಹೂಟಗಳ್ಳಿ ಉಪವಿಭಾಗದಲ್ಲಿ ಇರುವ ಎ.ಟಿ.ಪಿ ತಂತ್ರಾಂಶವನ್ನು ಮೇಲ್ದರ್ಜೆಗೇರಿಸಿ, ಜಿ.ಜಿ. ಬ್ಲಾಕ್ ನಿವಾಸಿ ಯವರು ಹಣ ಪಾವತಿ ಮಾಡುವ ಹಾಗೆ ಮಾಡಲು ಸಂಬಂಧಪಟ್ಟವರಿಗೆ ಕ್ರಮ ಕೈಗೊಳ್ಳಲು ಕೋರಲಾಗಿದೆ. |
| 4 | ಶ್ರೀ ನಂಜುಂಡ, ಹಿನಕಲ್, ಮೈಸೂರು | ▪ ಹಿನಕಲ್ ವ್ಯಾಪ್ತಿಯ AB ಕೇಬಲ್ ಅಳವಡಿಸಿದ್ದು, ಶಾಖಾಧಿಕಾರಿಯವರಿಗೆ ಪ್ರಶಂಸನೀಯ ವ್ಯಕ್ತ ಪಡಿಸಿದರು.<br>▪ ಹಿನಕಲ್ ವ್ಯಾಪ್ತಿಯಲ್ಲಿರುವ ಎಲ್.ಟಿ. ಲೈನ್ ಸಿಫ್ಟ್ ಮಾಡಲು ಕೋರಿರುತ್ತಾರೆ. | ▪ AB ಕೇಬಲ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>▪ ಎಲ್.ಟಿ. ಲೈನ್ ಸಿಫ್ಟ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

Scanned by CamScanner

ನಂತರ, ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ದಿನಾಂಕ : 08.11.2017 ರ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿ, ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡಂತಿರುತ್ತವೆ :**

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | **ಶ್ರೀ ರವಿಕುಮಾರ್ ವಿಜಯನಗರ 1ನೇ ಹಂತ** | ▪ ವಿಜಯನಗರ 3ನೇ ಹಂತ, 'ಡಿ' ಬ್ಲಾಕ್‌ನಲ್ಲಿ ಶ್ರೀ ಲೋಬೊ ರವರ ಮನೆಗೆ ಲೋ ಓಲ್ಟೇಜ್ ಇರುವುದಾಗಿ ತಿಳಿಸಿರುತ್ತಾರೆ.<br>▪ ವಿಜಯನಗರ 3ನೇ ಹಂತದ ಗರುಡಾಚಾರ್ ಬಡಾವಣೆಯಲ್ಲಿ ಕಂಬ ಶಿಥಿಲಗೊಂಡಿರುವುದಾಗಿ ತಿಳಿಸಿರುತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಗ್ರಾಹಕರಿಗೆ ಉತ್ತರಿಸಿ, ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ<br>ವಿಜಯನಗರ 3ನೇ ಹಂತ, 'ಡಿ' ಬ್ಲಾಕ್‌ನಲ್ಲಿ ಶ್ರೀ ಲೋಬೊ ರವರ ಮನೆಗೆ ಲೋ ಓಲ್ಟೇಜ್ ಹಾಗೂ ವಿಜಯನಗರ 3ನೇ ಹಂತದ ಗರುಡಾಚಾರ್ ಬಡಾವಣೆಯಲ್ಲಿ ಶಿಥಿಲಗೊಂಡಿರುವ ಕಂಬದ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದರು. |
| 2 | **ಅಶ್ವಥ್ ನಾರಾಯಣ** | ▪ ಜನ ಸಂಪರ್ಕ ಸಭೆಯನ್ನು ಹೆಚ್ಚಿನ ಪ್ರಚಾರ ಮಾಡಬೇಕಾಗಿ ಕೋರಿರುತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಉತ್ತರಿಸುತ್ತ ಜನ ಸಂಪರ್ಕ ಸಭೆಯನ್ನು ಹೆಚ್ಚಿನ ಪ್ರಚಾರವನ್ನು ಚಾ.ವಿ.ಸ.ನಿ.ನಿ ವತಿಯಿಂದ ಈಗಾಗಲೆ ಪತ್ರಿಕಾ ಪ್ರಕಟಣೆಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಕಟಿಸಿರುವುದು ಹಾಗೂ ಕ್ಷೇತ್ರದ ಪ್ರತಿನಿದಿಯವರಿಗೆ ಮೊಬೈಲ್ ಮುಖಾಂತರ ತಿಳಿಸುತ್ತಿದ್ದೇವೆ. |

Scanned by CamScanner

| | | | |
|---|---|---|---|
| | | | ಹಾಗೂ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಮಾಡಲಾಗುವುದು ಎಂದು ತಿಳಿಸಿದರು. |
| 3 | **ಬಸವರಾಜು, ಹಿನಕಲ್, ಮೈಸೂರು** | ▪ ಅಧಿಕ ಭದ್ರತಾ ಠೇವಣಿ ಮೊತ್ತವನ್ನು ಬಾಡಿಗೆದಾರರಾದ ನಾವು ಕಟ್ಟಬೇಕೆ ? ಅಥವಾ ಮನೆ ಮಾಲೀಕರು ಕಟ್ಟಬೇಕೆ ? ಎಂಬುದನ್ನು ಪ್ರಶ್ನಿಸಿದ್ದರು | ▪ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಉತ್ತರಿಸಿ, ಜನವರಿಯಿಂದ ಡಿಸೆಂಬರ್ ವರೆಗಿನ ಸರಾಸರಿ ಬಳಕೆಯ 2 ಪಟ್ಟು ಭದ್ರತಾ ಠೇವಣ ಮೊತ್ತವು ತಮ್ಮ ಆರ್.ಆರ್.ಸಂಖ್ಯೆ ಯ ಖಾತೆಯಲ್ಲಿ ಇರಬೇಕು. ಕಡಿಮೆ ಇದ್ದಲ್ಲಿ ಈ ಮೊತ್ತಕ್ಕೆ ಅಧಿಕ ಭದ್ರತಾ ಠೇವಣಿಯನ್ನು ಬೇಡಿಕೆ ಮಾಡಲಾಗುವುದು. ಸದರಿ ಆರ್.ಆರ್ ಸಂಖ್ಯೆಯ ಮನೆಯಲ್ಲಿ ಗ್ರಾಹಕರು ಅಥವಾ ಮಾಲೀಕರು ವಾಸವಾಗಿರುತ್ತಾರೆಯೋ ಎಂಬುದು ಇಲಾಖೆಗೆ ತಿಳಿದಿರುವುದಿಲ್ಲ. ಆದ್ದರಿಂದ ಅಧಿಕ ಭದ್ರತಾ ಠೇವಣಿ ಮೊತ್ತವನ್ನು ಗ್ರಾಹಕರು ಪಾವತಿ ಮಾಡಲೇ ಬೇಕಾಗುತ್ತದೆ ಎಂದು ತಿಳಿಸಿದ್ದರು. |
| 4 | **ಶ್ರೀ ಚಿನ್ನಪ್ಪ, ಲಿಂಗದೇವರಕೊಪ್ಪಲು, ಮೈಸೂರು** | ▪ ಇವರು ಹೊಸ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ನೊಂದಾಯಿಸಿದ್ದು ಹಣ ಪಾವತಿಸಲು ಇಲಾಖೆಯಿಂದ ಮಂಜೂರಾತಿ ನೀಡಿದ್ದು ನಾನು ನಿವೃತ ಸೈನಿಕನಾಗಿದ್ದು ಇದರ ಠೇವಣಿ ಮೊತ್ತವನ್ನು ಕಡಿಮೆ ಮಾಡಿಕೊಡಲು ಕೋರಿರುತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಉತ್ತರಿಸಿ, ನಮ್ಮ ಇಲಾಖೆಯಲ್ಲಿ ಇಲಾಖಾ ಠೇವಣಿ ಮೊತ್ತವನ್ನು ಕಡಿಮೆ ಮಾಡಲು ಯಾವುದೇ ಅವಕಾಶವಿರುವುದಿಲ್ಲವೆಂದು ತಿಳಿಸಿದ್ದರು. ಹಾಗೂ ತಾವು ಠೇವಣಿ ಮೊತ್ತವನ್ನು ಪೂರ್ತಿಯಾಗಿ ಹಣ ಪಾವತಿಸಬೇಕಾಗಿರುತ್ತದೆ ಎಂದು ತಿಳಿಸಿದ್ದರು. |

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ, ಗ್ರಾಹಕರು ಈ ಸಭೆಯಲ್ಲಿ ದಾಖಲಿಸಿದ ದೂರುಗಳನ್ನು ಆಧ್ಯತೆ ಮೇರೆಗೆ ಬಗೆಹರಿಸುವುದಾಗಿ ತಿಳಿಸಿ, ಭಾಗವಹಿಸಿದ ಎಲ್ಲಾ ಗ್ರಾಹಕರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

Scanned by CamScanner

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ.

Scanned by CamScanner